**ಶ್ರೀ ಅನಂತ್ ನಾಗ್ :-** ಮಾನ್ಯ ಸಭಾಧ್ಯಕ್ಷರೇ, ಕನಕಪುರ ರಸ್ತೆ-ಬನಶಂಕರಮ್ಮ ದೇವಾಲಯದ ಹತ್ತಿರ ರಸ್ತೆ ತುಂಬಾ ಕಿರಿದಾಗಿದ್ದು, ಅದನ್ನು ಅಗಲ ಮಾಡುವ ಬಗ್ಗೆ ನಗರಪಾಲಿಕೆಯ ಗಮನಕ್ಕೆ ಬಂದಿದೆ. ಆ ಹಳ್ಳವನ್ನು ತುಂಬಿಸುವ ಕೆಲಸ ಶುರು ಮಾಡಿದ್ದೇವೆ. ಆದಷ್ಟು ಬೇಗ ಅದನ್ನು ಮಾಡಿ ಅಗಲ ಮಾಡುವ ವ್ಯವಸ್ಥೆ ಮಾಡುತ್ತೇವೆ.

**ಶ್ರೀ ಎಂ. ಶ್ರೀನಿವಾಸ್ :-** ಕನಕಪುರ ರಸ್ತೆಯ ಎಡಗಡೆ ಆಳ ಇದೆ. ಅದೆಲ್ಲವನ್ನೂ ಮುಚ್ಚಿಸಿ ರಸ್ತೆಯನ್ನು ಅಗಲ ಮಾಡುವ ಕಾರ್ಯಕ್ರಮವನ್ನು ಎರಡು ತಿಂಗಳೊಳಗಾಗಿ ಪ್ರಾರಂಭ ಮಾಡುತ್ತಿರೋ?

**ಶ್ರೀ ಅನಂತ್ ನಾಗ್ :-** ಆದಷ್ಟು ಬೇಗ ಈ ಕೆಲಸವನ್ನು ಪ್ರಾರಂಭಿಸುತ್ತೇವೆ.

**ವಿಷಯ :- ಉಡುಪಿ ನಗರದಲ್ಲಿ ಆರಕ್ಷಿತ ಠಾಣೆಯ ಕಟ್ಟಡ ನಿರ್ಮಾಣ.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 254 (1854)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನಗರ ಆರಕ್ಷಕ ಠಾಣೆಯು ಬಾಡಿಗೆ ಕಟ್ಟಡದಲ್ಲಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆರಕ್ಷಕ ಠಾಣೆಗೆ ಕಟ್ಟಡ ಕಟ್ಟಲು ಜಾಗ ಮಂಜೂರಾಗಿದ್ದು ನೀಲಿ ನಕಾಶೆಗೆ ಅನುಮೋದನೆ ಸಿಕ್ಕಿದ್ದರೂ ಸಹ ಕಟ್ಟಡದ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು?

ಇ) ಸದರಿ ಕೆಲಸ ಯಾವಾಗ ಪ್ರಾರಂಭವಾಗುವುದು (ವಿವರ ನೀಡುವುದು)?

ಶ್ರೀ ಆರ್. ರೋಷನ್ ಬೇಗ್ (ಗೃಹ ರಾಜ್ಯ ಸಚಿವರು) :-

ಅ) ಹೌದು.

ಆ) ಅನುದಾನ ಲಭ್ಯವಾಗದ ಮೂಲಕ ಈ ಕಟ್ಟಡದ ಆಡಳಿತಾತ್ಮಕ ಮಂಜೂರಾತಿಯನ್ನು ಇನ್ನೂ ನೀಡಿಲ್ಲ.

ಇ) ಮುಂದಿನ ವರ್ಷಗಳ ಆಯವ್ಯಯದಲ್ಲಿ ಸೂಕ್ತ ಅನುದಾನ ಒದಗಿಸಿ ಕೊಂಡು ಕಟ್ಟಡದ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

**ಶ್ರೀ ಯು. ಆರ್. ಸಭಾಪತಿ :-** ಉಡುಪಿ ನಗರ ಆರಕ್ಷಕ ಠಾಣೆಯ ಬಾಡಿಗೆ ಕಟ್ಟಡವನ್ನು ತೆರವು ಮಾಡಲು ಯಾವ ಆದೇಶ ನೀಡಿದೆ? ಕೋರ್ಟ್ ಆದೇಶ ಇದ್ದರೂ ಕೂಡ ತಾವು ಇನ್ನೂ ತೆರವು ಮಾಡದಿದ್ದರೆ ಕಟ್ಟಡದ ಮಾಲೀಕರು ಏನು ಮಾಡಬೇಕು?

**SRI R. ROSHAN BAIG** :- A proposal has come from the police Department to the Government to include the same in 1996-97 Budget. The propasal is dated 30-5-1996. ಆದಷ್ಟು ಬೇಗನೆ ಕಾರ್ಯಕ್ರಮವನ್ನು ಶುರು ಮಾಡುತ್ತೇವೆ.

**ಶ್ರೀ ಯು. ಆರ್. ಸಭಾಪತಿ** :- ತೆರವು ಮಾಡಬೇಕೆಂದು ಕೋರ್ಟ್ ಆದೇಶ ಇರುವುದು ತಮ್ಮ ಗಮನಕ್ಕೆ ಬಂದಿದೆ. ಕೋರ್ಟ್ ಆದೇಶ ಇದ್ದರೂ ತಾವು ಕಟ್ಟಡ ತೆರವು ಮಾಡದಿದ್ದರೆ ಮಾಲೀಕರಿಗೆ ಹೇಗೆ ನ್ಯಾಯ ಒದಗಿಸುತ್ತೀರಿ?

**ಶ್ರೀ ರೋಷನ್ ಬೇಗ್** :- ಹಣ ರಿಲೀಸ್ ಆಗಿದೆ. ಆದಷ್ಟು ಬೇಗ ಕೆಲಸವನ್ನು ಶುರು ಮಾಡುತ್ತೇವೆ.

**ವಿಷಯ :- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಹಂಚಿಕೆ.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 255 (411)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ರಹಿತರು ನಿವೇಶನ ಗಳಿಗಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು?

2) ಈ ಅರ್ಜಿಗಳಿಂದ ಬಿ.ಡಿ.ಎ. ಗೆ ಸಂದಾಯವಾಗಿರುವ ಶುಲ್ಕ ಹಾಗೂ ಠೇವಣಿ ಹಣದ ವಿವರಗಳನ್ನು ಒದಗಿಸುವುದು.

3) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅರ್ಜಿದಾರರಿಗೆ ನಿವೇಶನಗಳನ್ನು ಹಂಚಲು ಹೊಸದಾಗಿ ಬಡಾವಣೆಗಳನ್ನು ನಿರ್ಮಾಣ ಮಾಡುತ್ತಿದೆಯೇ?

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :-

ಅ) ಒಟ್ಟು 86, 988 ಮಂದಿ ನಿವೇಶನಗಳ ಹಂಚಿಕೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಆ) ರೂ. 34,11,46,000-00 ಗಳನ್ನು ಠೇವಣಿ ರೂಪದಲ್ಲಿ ಸ್ವೀಕರಿಸಲಾಗಿದೆ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಜಮೀನು ಲಭ್ಯವಿರುವ ಕಡೆ ಸ್ವಾಧೀನ ಪಡಿಸಿಕೊಂಡು ಮತ್ತು ಅದರ ಯೋಜನೆಯಂತೆ ಹೊಸ ಬಡಾವಣೆಗಳನ್ನು ರಚಿಸಲು ಕ್ರಮ ಕೈಗೊಂಡಿರುತ್ತದೆ.